'ಗುರುಭವನ' ಶಿಕ್ಷಕರ ವಿರುದ್ಧ ಕೆಡಿಪಿ ಸಭೆ ಗರಂ

ಜಿಪಂ ಕೆಡಿಪಿ ಸಭೆಯಲ್ಲಿ ಗಮನ ಸೆಳೆದ ಚರ್ಚೆ; ಕ್ರಮಕ್ಕೆ ಡಿಡಿಪಿಐಗೆ ಸೂಚನೆ

ಮೈಸೂರು,ಜ.೧೨– ಶಾಲಾ ಅವಧಿಯಲ್ಲಿ ಗುರುಭವನಗಳಲ್ಲಿ ಕಾಲ ಕಳೆಯುವ ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಂಚಾಯಿತಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಸೂಚಿಸಲಾಯಿತು.

ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ನಯೀಮಾ ಸುಲ್ತಾನ ನಜೀರ್ ಅಹಮದ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಜಿಪಂ ಸಭಾಂಗಣದಲ್ಲಿ ನಡೆದ ನವೆಂಬರ್ ತಿಂಗಳ ಮಾಸಿಕ ಕೆಡಿಪಿ ಸಭೆಯಲ್ಲಿ ಅನುಪಾಲನಾ ವರದಿ ಮೇಲೆ ಈ ವಿಚಾರ ಪ್ರಸ್ತಾಪ ಮಾಡಲಾಯಿತು.

ಈ ಸಂಬಂಧ ನಡೆದ ಚರ್ಚೆಗೆ ಉತ್ತರಿಸಿದ ಡಿಡಿಪಿಐ ಮಂಜುಳಾ ಅವರು, ಗುರುಭವನಗಳಲ್ಲಿ ತರಬೇತಿ ಕಾರ್ಯಕ್ರಮಗಳು ಇರುವ ವೇಳೆ ಶಿಕ್ಷಕರು ಭಾಗವಹಿಸುತ್ತಾರೆ. ಪಾಠ ಮಾಡದೇ ಗುರು ಭವನಗಳಲ್ಲಿ ಕಾಲ ಕಳೆಯುವ ಶಿಕ್ಷಕರ ವಿರುದ್ಧ ಕ್ರಮ ಜರುಗಿಸುವಂತೆ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಇದಕ್ಕೆ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಅಧ್ಯಕ್ಷ ದಯಾನಂದ ಮೂರ್ತಿ ಅವರು ಪ್ರತಿಕ್ರಿಯಿಸಿ, ನೀವು ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ ಶಾಲಾ ಅವಧಿಯಲ್ಲಿ ಗುರುಭವನಗಳಲ್ಲಿ ಕಾಲ ಕಳೆಯುವ ಶಿಕ್ಷಕರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಹೇಳಿದರು.

ಬ್ಯಾಂಕ್ ವ್ಯವಸ್ಥಾಪಕರ ಸಭೆ: ನಿರುದ್ಯೋಗಿಗಳಿಗೆ ಸಾಲ ಸೌಲಭ್ಯ ನೀಡಿ ಸ್ವಾವಲಂಬಿಗಳನ್ನಾಗಿ ಮಾಡಲು ಜಿಲ್ಲಾ ಪಂಚಾಯಿತಿ ನೀಡಿರುವ ಸಹಾಯಧನವನ್ನು ನೀಡಲು ವಿಳಂಬ ನೀತಿ ಅನುಸರಿಸುತ್ತಿರುವ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಸಭೆಯಲ್ಲಿ ಆಕ್ರೋಶ ವ್ಯಕ್ತವಾಯಿತು.

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಬೀರಿಹುಂಡಿ ಬಸವಣ್ಣ ೩ ವರ್ಷಗಳಿಂದ ಕೇವಲ ೫೦ ಸಾವಿರ ರೂ. ಸಾಲ ನೀಡಲು ಫಲಾನುಭವಿಗಳನ್ನು ಅಲೆಸುತ್ತಿರುವ ಬ್ಯಾಂಕ್ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಜಿಪಂ ನಿರುದ್ಯೋಗಿಗಳಿಗೆ ಸಾಲ ನೀಡಲೆಂದು ೫ ಕೋಟಿ ೪೦ ಲಕ್ಷ ರೂ. ನೀಡಿದೆ. ಆ ಹಣವನ್ನು ನೀಡಲು ಎಷ್ಟು ದಿನ ಬೇಕೆಂದು ಪ್ರಶ್ನಿಸಿದರು.

ಜಿಪಂ ಯೋಜನಾ ನಿರ್ದೇಶಕರು ೫೬೪೨ ತಾತ್ಕಾಲಿಕ ಅಭ್ಯರ್ಥಿಗಳನ್ನು ಸಾಲ ಮಂಜೂರು ಮಾಡಲು ಆಯ್ಕೆ ಮಾಡಲಾಗಿದೆ. ಇವರಲ್ಲಿ ೧೩೫೬ ಮಂದಿಗೆ ಸಾಲ ನೀಡಲಾಗಿದೆ. ೪೨೭೭ ಮಂದಿಗೆ ಸಾಲ ನೀಡಬೇಕಿದೆ ಎಂದು ಉತ್ತರ ನೀಡಿದರು. ಬ್ಯಾಂಕಿನವರು ಸ್ಪಂದಿಸದಿದ್ದರೆ ಈ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ ಎಂದು ಉತ್ತರಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬೀರಿಹುಂಡಿ ಬಸವಣ್ಣ, ಸಾಲ ನೀಡಲಾಗದ ಬ್ಯಾಂಕ್‌ಗಳ ವ್ಯವಸ್ಥಾಪಕರಿಂದ ಲಿಖಿತವಾಗಿ ಬರೆಸಿಕೊಳ್ಳುವಂತೆ ಮತ್ತು ತಾಲ್ಲೂಕುವಾರು ಬ್ಯಾಂಕ್ ವ್ಯವಸ್ಥಾಪಕರ ಸಭೆ ಕರೆದು ಸಮಸ್ಯೆಯನ್ನು ಬಗೆಹರಿಸಿ ಶೀಘ್ರವಾಗಿ ಸಾಲ ನೀಡುವಂತೆ ಸಲಹೆ ನೀಡಿದರು.

ಮುಖ್ಯಮಂತ್ರಿ ಅನಿಲ ಭಾಗ್ಯ: ಈ ಯೋಜನೆಯಡಿ ವಿವಿಧ ಇಲಾಖೆಗಳಿಂದ ಗುರುತಿಸಲ್ಪಟ್ಟಿರುವ ಅಂದಾಜು ೧೯೮೭ ಫಲಾನುಭವಿಗಳಿಗೆ ಸುಮಾರು ೪೦೪೦ ರೂ.ಗಳ ವೆಚ್ಚದಲ್ಲಿ ಗ್ಯಾಸ್ ಸಿಲಿಂಡರ್, ಸ್ಟೌವ್ ನೀಡಲಾಗುವುದು. ಮೊದಲ ಹಂತದಲ್ಲಿ ೬೩೨ ಕುಟುಂಬಗಳಿಗೆ ಉಚಿತ ಅಡುಗೆ ಅನಿಲ ಸಂಪರ್ಕ ನೀಡಲಾಗುವುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿ ಎಚ್.ಕೆ.ರಾಮು ಸಭೆಗೆ ಮಾಹಿತಿ ನೀಡಿದರು.

ಉಳಿದ ತೆಂಗಿನ ಸಸಿಗಳು ಉಚಿತ ವಿತರಣೆ: ತೋಟಗಾರಿಕೆ ಇಲಾಖೆ ವತಿಯಿಂದ ರೈತರಿಗೆ ರಿಯಾಯಿತಿ ದರದಲ್ಲಿ ನೀಡಿಯೂ ಉಳಿದಿರುವ ತೆಂಗಿನ ಸಸಿಗಳನ್ನು ರೈತರಿಗೆ ಉಚಿತವಾಗಿ ನೀಡುವಂತೆ ದಯಾನಂದಮೂರ್ತಿ ಸಲಹೆ ನೀಡಿದರು.

ಶಿಕ್ಷಣ, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷೆ ಜಯಲಕ್ಷ್ಮೀ ರಾಜಣ್ಣ, ಜಿಪಂ ಸಿಇಒ ಪಿ.ಶಿವಶಂಕರ್, ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಮೈಸೂರಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಪಂ ಅಧ್ಯಕ್ಷೆ ನಯೀಮಾ ಸುಲ್ತಾನ ನಜೀರ್ ಅಹಮದ್ ಅವರ ಅಧ್ಯಕ್ಷತೆಯಲ್ಲಿ ನವೆಂಬರ್ ಮಾಹೆಯ ಕೆಡಿಪಿ ಸಭೆ ನಡೆಯಿತು. ಸ್ಥಾಯಿ ಸಮಿತಿ ಅಧ್ಯಕ್ಷರಾದ ಬೀರಿಹುಂಡಿ ಬಸವಣ್ಣ, ದಯಾನಂದಮೂರ್ತಿ, ಜಯಲಕ್ಷ್ಮಿ ರಾಜಣ್ಣ, ಪ್ರಭುಸ್ವಾಮಿ ಮುಂತಾದವರು ಭಾಗವಹಿಸಿದ್ದರು.

೯೫ ಸಾವಿರ ಗುರಿ ಮುಟ್ಟಿದ ಯುವ ಸ್ಪಂದನಾ

ಮೈಸೂರು: ಯುವಜನರ ಮಾರ್ಗದರ್ಶನ ಕೇಂದ್ರವು ಮೈಸೂರು ಜಿಲ್ಲೆಯಲ್ಲಿ ೯೫ ಸಾವಿರ ಯುವಕರನ್ನು ತಲುಪಿ ಅವರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಶ್ರಮಿಸಿದೆ.

ರಾಜ್ಯ ಸರ್ಕಾರದ ನೂತನ ಕಾರ್ಯಕ್ರಮವಾದ ಯುವ ಸ್ಪಂದನ ಕೇಂದ್ರದ ಕಾರ್ಯಕ್ರಮಗಳ ಬಗ್ಗೆ ಜಿಲ್ಲಾ ಪಂಚಾಯಿತಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ನಿಮ್ಹಾನ್ಸ್ ಆಸ್ಪತ್ರೆಯ ಕ್ಷೇತ್ರ ಸಂಪರ್ಕಾಧಿಕಾರಿ ಬಿ.ಸಿ.ಆನಂದ್ ಮಾಹಿತಿ ನೀಡಿದರು.

ಮೈಸೂರು ಜಿಲ್ಲೆಯಲ್ಲಿ ೨೦೧೫ರ ಆಗಸ್ಟ್‌ನಿಂದ ೨೦೧೮ರ ಡಿಸೆಂಬರ್‌ವರೆಗೆ ೩೩೬ ಸಂಪನ್ಮೂಲ ಕ್ರೋಢೀಕರಣ ಮಾಡಿದ್ದು, ೩೭೧ ಅರಿವು ಕಾರ್ಯಕ್ರಮಗಳನ್ನು ನೀಡಿದ್ದು, ೮೩ ಮಾರ್ಗದರ್ಶನ ಕೇಂದ್ರಗಳ ಮೂಲಕ ೯೫೬೪ ಯುವಕರನ್ನು ತಲುಪಲಾಗಿದೆ ಎಂದು ತಿಳಿಸಿದರು.

ಯುವ ಸ್ಪಂದನ ಕೇಂದ್ರವು ಸಂಬಂಧಗಳು, ಸುರಕ್ಷತೆ, ಸಂವಹನ, ಲಿಂಗ ಮತ್ತು ಲೈಂಗಿಕತೆ, ಮಾರ್ಗದರ್ಶನವು, ಶಿಕ್ಷಣ, ಬೆಳವಣಿಗೆ, ಆರೋಗ್ಯ ಮತ್ತು ಜೀವನಶೈಲಿ, ಸಬಲೀಕರಣ, ಭಾವನೆಗಳು ಬಗ್ಗೆ ಮಾಹಿತಿ ನೀಡುತ್ತಿದೆ. ಯಾವುದೇ ವಯೋಮಾನದವರು ಯುವಜನ ಸಂಬಂಧಿ ತೊಂದರೆಗಳಿಗಾಗಿ ಯುವ ಸ್ಪಂದನ ಕೇಂದ್ರವನ್ನು ಸಂಪರ್ಕಿಸಬಹುದು ಎಂದು ನುಡಿದರು.

ಯುವ ಪರಿವರ್ತಕರಾದ ಎಸ್.ಸುಷ್ಮಾ, ಕೆ.ಎನ್.ರಾಘವೇಂದ್ರ, ಜಯಚಂದ್ರ, ಬಾಲರಾಜು ಮುಂತಾದವರು ಹಾಜರಿದ್ದರು.

೧೦ ಕೋಳಿ ಮರಿಗಳನ್ನು ಕೊಡುವುದೂ ಒಂದು ಕಾರ್ಯಕ್ರಮವೇ. ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಬರೀ ೧೦ ಕೋಳಿ ಮರಿಗಳನ್ನು ನೀಡಲಾಗುತ್ತಿದೆ. ಮುಂದಿನ ವರ್ಷದಿಂದ ಹೆಚ್ಚು ಕೋಳಿ ಮರಿಗಳನ್ನು ನೀಡಬೇಕು.

-ದಯಾನಂದಮೂರ್ತಿ,
ಸ್ಥಾಯಿ ಸಮಿತಿ ಅಧ್ಯಕ್ಷರು

ಬಿಹಾರದಲ್ಲಿ ಮೇವು ತಿಂದವರು ಜೈಲು ಸೇರಿದರು. ಮೈಸೂರಿನಲ್ಲಿ ಹುಲ್ಲು ತಿಂದವರ ಮಾಹಿತಿಯೇ ನಮಗೆ ಲಭ್ಯವಾಗುತ್ತಿಲ್ಲ. ಅವರನ್ನು ಮಾಹಿತಿ ಕೇಳಿದರೆ ಇವರು, ಇವರ ಮೇಲೆ ಅವರು ಹೇಳುತ್ತಿದ್ದಾರೆ. ಮುಂದಿನ ಸಾಮಾನ್ಯ ಸಭೆಯಲ್ಲಿ ಅವರ ವಿಚಾರವನ್ನು ಪ್ರಸ್ತಾಪಿಸಲಾಗುವುದು.

-ಬೀರಿಹುಂಡಿ ಬಸವಣ್ಣ,
ಸ್ಥಾಯಿ ಸಮಿತಿ ಅಧ್ಯಕ್ಷರು

ಕೆಡಿಪಿ ಸಭೆಗೆ ಬರುವ ಅಧಿಕಾರಿಗಳು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕಾರ್ಯಕ್ರಮಗಳು ಸೇರಿದಂತೆ ರಾಜ್ಯ ಸರ್ಕಾರದ ಎಲ್ಲಾ ಯೋಜನೆಗಳ ಬಗ್ಗೆ ಮಾಹಿತಿಯೊಂದಿಗೆ ಬರಬೇಕು.

-ಪಿ.ಶಿವಶಂಕರ್,
ಸಿಇಒ, ಜಿಪಂ

ನಾಳೆ 'ಸಂಡೆ ಕ್ಲಿನಿಕ್'

ಮೈಸೂರು,ಜ.೧೨–ಜ.೧೪ರಂದು ಬೆಳಿಗ್ಗೆ ೮ ಗಂಟೆಯಿಂದ ಮಧ್ಯಾಹ್ನ ೧೨ರವರೆಗೆ ನಗರದ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವತಿಯಿಂದ 'ಸಂಡೆ ಕ್ಲಿನಿಕ್' ಆಯೋಜಿಸಲಾಗಿದೆ.

ನಗರದ ಶಿವರಾಂ ಪೇಟೆಯ ವಿನೋಬ ರಸ್ತೆಯಲ್ಲಿರುವ ಎಲ್.ರಾಮಶೇಷಯ್ಯ ಮತ್ತು ಲಕ್ಷ್ಮಿ ದೇವಮ್ಮ ಕ್ಲಿನಿಕ್‌ನಲ್ಲಿ ಮಧುಮೇಹ ಹಾಗೂ ಹೃದಯ ಸಂಬಂಧಿ ಕಾಯಿಲೆಯ ತಪಾಸಣೆಯನ್ನು ವಿಶೇಷ ದರದಲ್ಲಿ ನಡೆಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ.೮೮೪೭೪೪೧೪೪ಕ್ಕೆ ಸಂಪರ್ಕಿಸುವಂತೆ ಮಾರುಕಟ್ಟೆ ಮುಖ್ಯಸ್ಥ ಕೆ.ವಿ.ಕಾಮತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜ.೧೨– ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮದ ರಾಮಕೃಷ್ಣನಗರ ಉಪವಿಭಾಗದ ೧೧ ಕೆವಿ ಹುಡ್ಕೋ ವಿದ್ಯುತ್ ಮಾರ್ಗದಲ್ಲಿ ಮುಡಾ ವತಿಯಿಂದ ರಸ್ತೆ ಅಗಲೀಕರಣ ಕಾಮಗಾರಿ ನಿಮಿತ್ತ ಜ.೧೩ರಂದು ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ ಗಂಟೆಯವರೆಗೆ ಮಧುವನ, ಬೆಮೆಲ್ ಬಡಾವಣೆ, ನಾಗಮ್ಮ ಛತ್ರ ಸುತ್ತಲಿನ ಪ್ರದೇಶಗಳು, ಶ್ರೀರಾಂಪುರ, ಎಸ್‌ಬಿಎಂ ಕಾಲೋನಿ, ದೇವಯ್ಯನಹುಂಡಿ, ಕಂದಾಯ ನಗರ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆಯಾಗಲಿದೆ ಎಂದು ಸೆಸ್ಕ್ ವಿವಿ ಮೊಹಲ್ಲಾ ವಿಭಾಗದ ಪ್ರಕಟಣೆ ತಿಳಿಸಿದೆ.

ನಾಳೆ ಕನ್ನಡ ಮಾಧ್ಯಮ ಕುರಿತ ಸಮಾವೇಶ ಪೂರ್ವಭಾವಿ ಸಭೆ

ಮೈಸೂರು,ಜ.೧೨– ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಜ.೨೮ರಂದು ನಡೆಯಲಿರುವ ಕನ್ನಡ ಮಾಧ್ಯಮ ಕುರಿತ ರಾಜ್ಯಮಟ್ಟದ ಸಮಾವೇಶದಲ್ಲಿ ಹೋರಾಟದ ಮುಂದಿನ ಹೆಜ್ಜೆಯನ್ನು ರಾಜ್ಯದ ವಿವಿಧ ಜಿಲ್ಲೆಗಳ ಚಿಂತಕರು, ಸಾಹಿತಿಗಳು, ಹೋರಾಟಗಾರರು ಸೇರಿ ನಿರ್ಧರಿಸಲಿದ್ದಾರೆ.

ಇದಕ್ಕಾಗಿ ಜ.೧೪ರಂದು ಸಂಜೆ ೫ ಗಂಟೆಗೆ ನೃಪತುಂಗ ಶಾಲೆ ಆವರಣದಲ್ಲಿ ಸಿದ್ಧತೆಗಳ ಕುರಿತು ಪೂರ್ವಭಾವಿ ಸಭೆ ಕರೆಯಲಾಗಿದೆ. ಕನ್ನಡಪರ ಸಂಘಟನೆಗಳು, ಸಾಹಿತಿಗಳು, ಜನಪರ ಹಾಗೂ ಪ್ರಗತಿಪರ ಸಂಘಟನೆಗಳು, ವಿದ್ಯಾರ್ಥಿಗಳು, ರಂಗಕರ್ಮಿಗಳು, ಆಸಕ್ತರು ಭಾಗವಹಿಸಿ ಸಲಹೆ, ಸೂಚನೆ ನೀಡಲು ಕೋರಲಾಗಿದೆ.

ವಿವರಗಳಿಗೆ ಕನ್ನಡ ಕ್ರಿಯಾ ಸಮಿತಿಯ ಕಾರ್ಯದರ್ಶಿ ಸಂಸ್ಕೃತಿ ಸುಬ್ರಹ್ಮಣ್ಯ ಅವರನ್ನು ಮೊ.ಸಂ.೯೪೪೮೦೩೬೬೨ ಸಂಪರ್ಕಿಸಬಹುದು.

ಮುಕ್ತ ವಿವಿ ಮಾನ್ಯತೆಗೆ ಕೇಂದ್ರದಿಂದ ಅನ್ಯಾಯ: ಮರಿತಿಬ್ಬೇಗೌಡ

ಮೈಸೂರು,ಜ.೧೨– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯತೆ ಸಂಬಂಧ ಸಮಸ್ಯೆಯನ್ನು ಬಗೆಹರಿಸುವುದಾಗಿ ಹೇಳಿದ್ದ ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರ್ ಅವರ ಭರವಸೆ ಸುಳ್ಳಾಗಿದ್ದು, ಕೇಂದ್ರದ ಬಿಜೆಪಿ ಸರ್ಕಾರ ಅನ್ಯಾಯವೆಸಗಿದೆ. ಈಗಲಾದರೂ ಮುಕ್ತ ವಿವಿಗೆ ಮಾನ್ಯತೆ ದೊರಕಿಸುವ ನಿಟ್ಟಿನಲ್ಲಿ ಕೇಂದ್ರ ಸಚಿವರು ಪ್ರಯತ್ನ ಮಾಡದಿದ್ದರೆ ಕರ್ನಾಟಕ ರಾಜ್ಯದ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಸೂಕ್ತವಲ್ಲ ಎಂದು ವಿಧಾನ ಪರಿಷತ್ ಉಪಸಭಾಪತಿ ಮರಿತಿಬ್ಬೇಗೌಡ ಹೇಳಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದ ಉನ್ನತ ಶಿಕ್ಷಣ ಸಚಿವರು ಮುಕ್ತ ವಿವಿಯ ಮೂಲ ಸೌಕರ್ಯಗಳನ್ನು ಬದಲಿ ಶೈಕ್ಷಣಿಕ ಉದ್ದೇಶಕ್ಕೆ ಬಳಸುವುದಾಗಿ ತಿಳಿಸಿ ಸಮಿತಿ ರಚಿಸಿದ್ದು, ಈ ಸಮಿತಿಯನ್ನು ಕೂಡಲೇ ರದ್ದುಪಡಿಸಬೇಕು. ೨೦೧೩–೧೪ರಿಂದ ಮುಕ್ತ ವಿವಿಯಲ್ಲಿ ನೇರವಾಗಿ ಪ್ರವೇಶ ಪಡೆದು ಪದವಿ ಪಡೆದಿರುವ ಪದವೀಧರರಿಗೆ ಸರ್ಕಾರದಲ್ಲಿ ಉನ್ನತ ಶಿಕ್ಷಣ, ಬಡ್ತಿ, ನೇಮಕಾತಿಗಳಿಗೆ ಪರಿಗಣಿಸಬೇಕು ಎಂದು ಆಗ್ರಹಿಸಿದ್ದಾರೆ.

ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಯ ಹಿತದೃಷ್ಟಿಯಿಂದ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ, ಯುಜಿಸಿ ಹಾಗೂ ರಾಜ್ಯ ಸರ್ಕಾರದ ಪ್ರತಿನಿಧಿಗಳು ಒಟ್ಟಾಗಿ ಸಭೆ ನಡೆಸಿ ಮುಕ್ತ ವಿವಿ ಮಾನ್ಯತೆ ನವೀಕರಿಸುವಂತೆ ಉಚ್ಚ ನ್ಯಾಯಾಲಯ ನೀಡಿರುವ ಆದೇಶವನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕಟ್ಟಡ ಕಾರ್ಮಿಕರಿಗೆ ಅನ್ಯಾಯ ಆರೋಪ ಸತ್ಯಕ್ಕೆ ದೂರ: ಆಯುಕ್ತ

ಮೈಸೂರು,ಜ.೧೨– ಜಿಲ್ಲೆಯಲ್ಲಿ ಇದುವರೆಗೆ ಸುಮಾರು ೫೩ ಸಾವಿರ ಕಟ್ಟಡ ಕಾರ್ಮಿಕ ಫಲಾನುಭವಿಗಳು ನೋಂದಣಿಯಾಗಿದ್ದು, ಫಲಾನುಭವಿಗಳು ವಿವಿಧ ಧನಸಹಾಯ ಅರ್ಜಿಗಳನ್ನು ಮಂಜೂರಾತಿ ಮಾಡಲು ಸಾಕಷ್ಟು ಸಿಬ್ಬಂದಿ ಅಗತ್ಯವಿದ್ದು, ಕಾರ್ಯಗಳ ಒತ್ತಡದ ನಡುವೆ ಮಂಜೂರಾತಿ ಮಾಡಲು ಸ್ವಲ್ಪ ವಿಳಂಬವಾಗಿರುವುದನ್ನು ಹೊರತುಪಡಿಸಿದರೆ ೨೦೧೪–೧೫ರಿಂದ ಸುಮಾರು ೧೨,೬೦೦ ಫಲಾನುಭವಿಗಳಿಗೆ ವಿವಿಧ ಧನಸಹಾಯವನ್ನು ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾಯಿಸಲಾಗಿದೆ ಎಂದು ಸಹಾಯಕ ಕಾರ್ಮಿಕ ಆಯುಕ್ತರು ಸ್ಪಷ್ಟನೆ ನೀಡಿದ್ದಾರೆ.

'ಆಂದೋಲನ' ದಿನಪತ್ರಿಕೆಯಲ್ಲಿ ಜ.೩ರಂದು 'ಕಾರ್ಮಿಕರಿಗೆ ಬಿಡುಗಡೆಯಾದ ಹಣ ನೀಡದೆ ವಂಚನೆ ಆರೋಪ' ಎಂಬ ಶೀರ್ಷಿಕೆಯಡಿ ಪ್ರಕಟವಾದ ಸುದ್ದಿಗೋಷ್ಠಿ ವರದಿಯ ಬಗ್ಗೆ ಸ್ಪಷ್ಟೀಕರಣ ನೀಡಿರುವ ಅವರು, ಸುದ್ದಿಗೋಷ್ಠಿಯಲ್ಲಿ ಹಾಜರಿದ್ದವರು ನೀಡಿರುವ ಹೇಳಿಕೆಗಳಲ್ಲಿ ಸತ್ಯಾಂಶವಿಲ್ಲ. ಕೆಲವು ಫಲಾನುಭವಿಗಳ ಖಾತೆಗೆ ಮಂಜೂರು ಮಾಡಬೇಕಿರುವ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ತಾಂತ್ರಿಕ ಕಾರಣಗಳಿಂದ ಜಮೆಯಾಗಿದ್ದು, ಹೆಚ್ಚುವರಿ ಮೊತ್ತವನ್ನು ಮಾತ್ರ ಹಿಂಪಡೆಯಲಾಗಿದೆ. ಅರ್ಹ ಮೊತ್ತ ಅವರ ಖಾತೆಯಲ್ಲಿಯೇ ಇದೆ. ಶಿವಬಾಲನ್ ಎಂಬವರು ತಮ್ಮ ಮಗನ ವಿದ್ಯಾಭ್ಯಾಸಕ್ಕೆ ೨೦ ಸಾವಿರ ರೂ. ಪಾವತಿಸುವಂತೆ ಕೋರಿದ್ದು, ನಿಯಮಾನುಸಾರ ಅವರೇ ಹಾಜರುಪಡಿಸಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪಾವತಿಸಿರುವ ಶುಲ್ಕದ ಚಲನ್‌ನಲ್ಲಿದ್ದ ೩೯೯೦ ರೂ.ಗಳನ್ನು ಪಾವತಿಸಲಾಗಿದೆ. ಫಲಾನುಭವಿಗಳ ಇಚ್ಛಾನುಸಾರ ಕೋರಿದಷ್ಟು ಮೊತ್ತ ಪಾವತಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಉದ್ಬೂರು ಜಾತ್ರೆಯಲ್ಲಿ ಅಸ್ಪೃಶ್ಯತೆ ಆಚರಣೆ ತಡೆಗೆ ಒತ್ತಾಯ

ಮೈಸೂರು,ಜ.೧೨– ತಾಲ್ಲೂಕಿನ ಜಯಪುರ ಹೋಬಳಿ ಉದ್ಬೂರು ಗ್ರಾಮದಲ್ಲಿ ಜ.೧೫, ೧೬ರಂದು ಸಂಕ್ರಾಂತಿ ಹಬ್ಬದ ಪ್ರಯುಕ್ತ ದೊಡ್ಡ ಜಾತ್ರೆ ನಡೆಯಲಿದ್ದು, ಈ ಗ್ರಾಮದಲ್ಲಿ ಚಾಲ್ತಿಯಲ್ಲಿರುವ ಅಸ್ಪೃಶ್ಯತೆ ಆಚರಣೆಯನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಮಹಾಪೌರ ಪುರುಷೋತ್ತಮ ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಉದ್ಬೂರು ಗ್ರಾಮದಲ್ಲಿ ಅಸ್ಪೃಶ್ಯತೆ ಚಾಲ್ತಿಯಲ್ಲಿದೆ. ಪ.ಜಾತಿ ಜನಾಂಗದವರಿಗೆ ಸಾರ್ವಜನಿಕ ಸ್ಥಳಗಳಾದ ದೇವಸ್ಥಾನ, ಕ್ಷೌರಿಕ ಅಂಗಡಿ, ಹಾಲು ಶೇಖರಣಾ ಕೇಂದ್ರ, ಪಡಿತರ ವಿತರಣಾ ಕೇಂದ್ರ, ಹೋಟೆಲ್‌ಗಳಿಗೆ ಮುಕ್ತ ಅವಕಾಶ ನೀಡದೆ ದೇವಾಲಯಕ್ಕೆ ಭೇಟಿ ನೀಡುವ ಪರಿಶಿಷ್ಟರನ್ನು ರಸ್ತೆ ಬದಿಯಲ್ಲೇ ನಿಲ್ಲಿಸಿ ಅವರ ಪೂಜಾ ಸಾಮಗ್ರಿಗಳನ್ನು ಮುಟ್ಟಿಸಿಕೊಳ್ಳದೆ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಿರುವುದು ಖಂಡನೀಯ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಮಸ್ಯೆಗಳನ್ನು ಬಗೆಹರಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಮುಖ್ಯಮಂತ್ರಿಗಳನ್ನು ಆಗ್ರಹಿಸಿದ್ದಾರೆ.

ಅಪಘಾತ: ಗಾಯಾಳುಗಳಿಗಾಗಿ ಬಸ್ ಆಂಬ್ಯುಲೆನ್ಸ್

೨೦ ಗಾಯಾಳುಗಳಿಗೆ ಒಮ್ಮೆಗೇ ಚಿಕಿತ್ಸೆ ಲಭ್ಯ; ಗೋಲ್ಡನ್ ಅವರ ಟ್ರಸ್ಟ್‌ನೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದ ಕೆಎಸ್‌ಆರ್‌ಟಿಸಿ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳು ಅಪಘಾತವಾದ ವೇಳೆ ಗಾಯಾಳುಗಳಿಗೆ ಸಕಾಲಕ್ಕೆ ಪ್ರಥಮ ಚಿಕಿತ್ಸೆ ಹಾಗೂ ಅಗತ್ಯ ಪ್ರಮಾಣದ ಆಂಬ್ಯುಲೆನ್ಸ್ ಲಭ್ಯವಾಗದೇ ಸಾವಿನ ಪ್ರಮಾಣ ಹೆಚ್ಚುತ್ತಿರುವುದಕ್ಕೆ ಕಡಿವಾಣ ಹಾಕಲು ಸಾರಿಗ ಸಂಸ್ಥೆ ಮುಂದಾಗಿದೆ.

ಈ ನಿಟ್ಟಿನಲ್ಲಿ ದೇಶದಲ್ಲೇ ಮೊದಲ ಬಾರಿಗೆ ೨೦ಕ್ಕೂ ಹೆಚ್ಚು ಗಾಯಾಳುಗಳಿಗೆ ಏಕಕಾಲಕ್ಕೆ ತುರ್ತು ಚಿಕಿತ್ಸೆ ನೀಡುವ ಬಸ್ ಆಂಬ್ಯುಲೆನ್ಸ್ ಅನ್ನು ಪರಿಚಯಿಸಿದೆ.

ಈಗಾಗಲೇ ಪ್ರಾಯೋಗಿಕವಾಗಿ ಬಸ್ ಆಂಬ್ಯುಲೆನ್ಸ್ ಅನ್ನು ಬಳಸಿದ್ದ ಕೆಎಸ್‌ಆರ್‌ಟಿಸಿ ಶುಕ್ರವಾರ ಅಧಿಕೃತವಾಗಿ ಬಸ್ ಅಂಬ್ಯುಲೆನ್ಸ್ ಸೇವೆಗೆ ಚಾಲನೆ ನೀಡಿದೆ. ಶಾಂತಿನಗರದಲ್ಲಿರುವ ನಾಲ್ಕನೇ ಡಿಪೋದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ಎಚ್.ಎಂ. ರೇವಣ್ಣ ಆಂಬ್ಯುಲೆನ್ಸ್‌ಗೆ ಚಾಲನೆ ನೀಡಿದರು. ಇದೇ ವೇಳೆ ಕೆಎಸ್‌ಆರ್‌ಟಿಸಿ, ಗೋಲ್ಡನ್ ಅವರ್ ಟ್ರಸ್ಟ್‌ನೊಂದಿಗೆ ಬಹುಹಾಸಿಗೆಗಳ ಅಪಘಾತ ಸುರಕ್ಷಿತ ವಾಹನದ ನಿರ್ವಹಣೆಗಾಗಿ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಆ ಮೂಲಕ ದೇಶದ ಸಾರಿಗೆ ನಿಗಮಗಳಲ್ಲಿ ಮೊದಲ ಬಾರಿಗೆ ಕೆಎಸ್‌ಆರ್‌ಟಿಸಿ ಹೊಸ ಬಸ್ಸಿನ ಚಾಸಿ ಮೇಲೆ ಬಹು ಹಾಸಿಗೆಗಳುಳ್ಳ ಆಂಬ್ಯುಲೆನ್ಸ್ ಅನ್ನು ಪರಿಚಯಿಸಿದೆ. ಹತ್ತು ಆಂಬ್ಯುಲೆನ್ಸ್‌ಗೆ ಈ ಆಂಬ್ಯುಲೆನ್ಸ್ ಸಮವಾಗಿದೆ. ಎಂಟು ರೋಗಿಗಳಿಗೆ ಮಲಗಿಸಿ ಮತ್ತು ೧೬ ಗಾಯಾಳುಗಳಿಗೆ ಕುಳಿತುಕೊಂಡ ಸ್ಥಿತಿಯಲ್ಲಿ ಚಿಕಿತ್ಸೆ ನೀಡುವ ಸೌಲಭ್ಯವನ್ನು ಈ ಆಂಬ್ಯುಲೆನ್ಸ್ ಹೊಂದಿದೆ. ತಕ್ಷಣ ಶುಶ್ರೂಷೆ ನೀಡಲು ಬೇಕಾದ ವೈದ್ಯಕೀಯ ಉಪಕರಣ, ನುರಿತ ದಾದಿಯರನ್ನು ನಿಯೋಜಿಸಲಾಗಿದೆ.

ಬಸ್ ಅಪಘಾತ ನಡೆದ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಧಾವಿಸಿ ಸೂಕ್ತ ಪ್ರಥಮ ಚಿಕಿತ್ಸೆ ನೀಡಿ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗುತ್ತದೆ.

ಒಡಂಬಡಿಕೆಗೆ ಸಹಿ ಹಾಕಿದ ಬಳಿಕ ಮಾತನಾಡಿದ ಸ್ಪರ್ಶ ಆಸ್ಪತ್ರೆಯ ನರರೋಗ ತಜ್ಞ ಡಾ. ಎನ್.ಕೆ. ವೆಂಕಟರಮಣ, ಹತ್ತು ಜನರು ಗಾಯಗೊಂಡಾಗ ಹತ್ತು ಆಂಬ್ಯುಲೆನ್ಸ್ ತರಬೇಕು. ಅದು ಕಷ್ಟ, ಅದಕ್ಕಾಗಿ ಈ ಬಸ್ ಹೃದಯ ನಿಯಂತ್ರಣ, ಹೃದಯಾಘಾತಕ್ಕೂ ತಕ್ಷಣ ಚಿಕಿತ್ಸೆ, ನಿಯಂತ್ರಣ ಕೊಠಡಿಯಿಂದ ಸಿಬ್ಬಂದಿಗೆ ಅಗತ್ಯ ಸಲಹೆ ನೀಡಲಾಗುತ್ತದೆ. ಸುನಾಮಿ, ನೆರೆ ಇತ್ಯಾದಿ ಅಪಘಾತದ ವೇಳೆ ಈ ಬಸ್ ಆಂಬ್ಯುಲೆನ್ಸ್ ಸಹಕಾರಿಯಾಗಲಿದೆ. ಸದ್ಯ ಒಂದು ಬಸ್ ಆಂಬ್ಯುಲೆನ್ಸ್ ಇದ್ದು, ಎಲ್ಲಾ ಪ್ರಮುಖ ಡಿಪೋಗಳಲ್ಲೂ ಬಸ್ ಆಂಬ್ಯುಲೆನ್ಸ್ ವ್ಯವಸ್ಥೆ ಕಲ್ಪಿಸುವ ಆಶಯವಿದೆ ಎಂದರು.

ಗೋಲ್ಡನ್ ಅವರ್ ಕಿಟ್‌ಅನ್ನು ಎಲ್ಲಾ ಬಸ್ಸಿನಲ್ಲಿಯೂ ಇಡುತ್ತೇವೆ. ವ್ಹೀಲ್ ಚೇರ್ ಇಡುತ್ತೇವೆ. ಕೈ ಕಾಲು ಸಿಲುಕಿಕೊಂಡರೆ ಕಬ್ಬಿಣದ ವಸ್ತು ಕತ್ತರಿಸಿ ಸಹಾಯ ಮಾಡಲು ಕಟ್ಟರ್ ರೀತಿ ವಸ್ತು ಇಡಲಾಗುತ್ತದೆ. ಜೊತೆಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎಲ್ಲಾ ಬಸ್ಸುಗಳನ್ನು ನೇರವಾಗಿ ಕಂಪ್ಯೂಟರ್‌ಗೆ ಸಂಪರ್ಕಿಸುವ ವ್ಯವಸ್ಥೆಗೆ ಚಿಂತನೆ ನಡೆಸಲಾಗಿದೆ ಎಂದರು.

ಅಪಘಾತ ರಹಿತ ಚಾಲಕರಿಗೆ ಬೆಳ್ಳಿ ಪದಕ: ಐದರಿಂದ ಏಳು ವರ್ಷಗಳ ಕಾಲ ಅಪಘಾತ ರಹಿತ ಬಸ್ ಚಾಲನೆ ಮಾಡಿದ ೮೬ ಚಾಲಕರಿಗೆ ಬೆಳ್ಳಿ ಪದಕ ನೀಡಿ ಗೌರವಿಸಲಾಯಿತು. ೨೦೧೩–೧೬ನೇ ಸಾಲಿನ ನಾಲ್ಕು ವರ್ಷದ ಅವಧಿಯಲ್ಲಿ ಒಟ್ಟು ೮೬ ಚಾಲಕರು ಪದಕ ಪಡೆಯಲು ಅರ್ಹತೆ ಪಡೆದುಕೊಂಡಿದ್ದು, ಈ ಚಾಲಕರಿಗೆ ಗಂಡಭೇರುಂಡ ಚಿಹ್ನೆಯುಳ್ಳ ೩೨ ಗ್ರಾಂ ಬೆಳ್ಳಿ ಪದಕ, ೨ ಸಾವಿರ ನಗದು, ೫೦ ರೂ. ಮಾಸಿಕ ಪ್ರೋತ್ಸಾಹ ಧನವನ್ನು ಸಾರಿಗೆ ಸಚಿವ ಎಚ್.ಎಂ ರೇವಣ್ಣ ಪ್ರದಾನ ಮಾಡಿದರು.

ನೃಪತುಂಗ ಕನ್ನಡ ಶಾಲೆ ವಾರ್ಷಿಕೋತ್ಸವ

ಭಾಷಾ ಉಳಿವಿಗಾಗಿ ವ್ಯಾವಹಾರಿಕವಾಗಬೇಕಿದೆ ಕನ್ನಡ: ಸುಚೇತನ ಸ್ವರೂಪ

ಮೈಸೂರು,ಜ.೧೨– ಕನ್ನಡವನ್ನು ಎಲ್ಲಿಯವರೆಗೂ ವ್ಯಾವಹಾರಿಕ ಭಾಷೆಯಾಗಿ ಭಾವಿಸುವುದಿಲ್ಲವೋ, ಅಲ್ಲಿಯವರೆಗೂ ನಮ್ಮ ಮಕ್ಕಳಿಗೆ ಆತ್ಮಸ್ಥೈರ್ಯ ಬರುವುದಿಲ್ಲ ಎಂದು ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತ ಸುಚೇತನ ಸ್ವರೂಪ್ ತಿಳಿಸಿದರು.

ರಾಮಕೃಷ್ಣನಗರದ ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯ ನೃಪತುಂಗ ಕನ್ನಡ ಶಾಲೆಯ ಬೇಂದ್ರೆ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಎಲ್ಲಾ ಮಕ್ಕಳೂ ಭಾರತೀಯ ಭಾಷೆಗಳನ್ನು ಬಿಟ್ಟು ಇಂಗ್ಲಿಷ್‌ನ ಮೊರೆ ಹೋಗುತ್ತಿದ್ದಾರೆ. ಯಾರಿಗೆ ಮಾತೃಭಾಷೆ ಸರಿಯಾಗಿ ಬರುವುದಿಲ್ಲವೋ, ಅವರಿಗೆ ಬೇರೆ ಭಾಷೆಯ ಮೇಲೂ ಹಿಡಿತವಿರುವುದಿಲ್ಲ. ಮನುಷ್ಯ ತನ್ನ ಪರಿಸರದ ಭಾಷೆಯನ್ನು ಕಲಿತರೆ ಅರ್ಧ ಸಮಸ್ಯೆಯೇ ಪರಿಹಾರವಾಗಲಿದೆ. ಅದಕ್ಕಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುವ ಅವಶ್ಯಕತೆ ಇದೆಯಾ? ಎಂದು ಕೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ ಮಾತನಾಡಿ, ಕನ್ನಡ ಶಾಲೆಗಳನ್ನು ಮುಚ್ಚುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಸಂಘಟನೆಯೊಂದು ಕನ್ನಡ ಶಾಲೆಯನ್ನು ಉಳಿಸಿಕೊಂಡಿರುವುದು ಆಶ್ಚರ್ಯವಾಗಿದೆ. ಬೆಂಗಳೂರಿನಲ್ಲಿ ಕೆಲವರು ಕನ್ನಡ ಹೋರಾಟಗಾರರೆಂದು ಹೇಳಿಕೊಂಡು ಬಿಜಿನೆಸ್‌ಮನ್‌ಗಳಿಂದ ವಸೂಲಿ ಮಾಡುತ್ತಿದ್ದಾರೆ. ಆದರೆ, ಹೋರಾಟದ ಸ್ಫೂರ್ತಿಯಲ್ಲಿ ಇಂತಹ ಕ್ರಿಯಾಶೀಲ ಚಟುವಟಿಕೆ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯ ಅಧ್ಯಕ್ಷ ಪ.ಮಲ್ಲೇಶ್, ಧರ್ಮದರ್ಶಿಗಳಾದ ಡಾ.ಎಚ್.ಟಿ.ಶೈಲಜಾ, ಎಂ.ಬಿ.ವಿಶ್ವನಾಥ್, ಲೋಕಪ್ಪ, ಮುಖ್ಯಶಿಕ್ಷಕರಾದ ಸೀತಾಕುಮಾರಿ, ಶುಭಕನ್ಯ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಇದೇ ಸಂದರ್ಭ ಶಿಕ್ಷಕರಾದ ಶೀಲಾ, ಬಸವರಾಜು ಅವರಿಗೆ ಪ್ರೋತ್ಸಾಹ ಬಹುಮಾನ ನೀಡಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಕರಿಗೆ ಬಹುಮಾನ ವಿತರಿಸಲಾಯಿತು. ಆನಂತರ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿರುವ ನೃಪತುಂಗ ಕನ್ನಡ ಶಾಲೆಯಲ್ಲಿ ಶುಕ್ರವಾರ ಪ್ರತಿಭಾವಂತ ಮಕ್ಕಳಿಗೆ 'ಆಂದೋಲನ ' ಪ್ರತಿಭಾ ಪುರಸ್ಕರವನ್ನು ನೀಡಲಾಯಿತು.ಸುಚೇತನ ಸ್ವರೂಪ್, ಮೋಹನ್ ಕೊಂಡಜ್ಜಿ, ಪ.ಮಲ್ಲೇಶ್, ಸ.ರ.ಸುದರ್ಶನ, ಎಂ.ಬಿ.ವಿಶ್ವನಾಥ್, ಡಿ.ಎನ್.ಲೋಕಪ್ಪ, ಡಾ.ಎಚ್.ಟಿ.ಶೈಲಜಾ, ಸೀತಾಕುಮಾರಿ ಮತ್ತಿತರರು ಚಿತ್ರದಲ್ಲಿದ್ದಾರೆ.

'ಆಂದೋಲನ' ದಿನಪತ್ರಿಕೆ ಸಂಸ್ಥಾಪಕ ಸಂಪಾದಕರಾದ ರಾಜಶೇಖರ ಕೋಟಿಯವರು ೧೧ ವರ್ಷಗಳಿಂದ ಸಂಸ್ಥೆಯಲ್ಲಿ ೧ರಿಂದ ೧೦ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ, ಅತಿ ಹೆಚ್ಚು ಅಂಕ ಪಡೆದ ಒಬ್ಬರಿಗೆ ಪ್ರತಿ ವರ್ಷ 'ಆಂದೋಲನ' ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತಿದ್ದರು. ಇದೀಗ ಅವರ ಮಗ ರವಿಕೋಟಿ ಅವರು 'ಸಾರ್, ನಮ್ಮ ಅಪ್ಪಾಜಿ ಯಾವ್ಯಾವ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದರೋ, ಅದನ್ನೆಲ್ಲ ಮುಂದುವರಿಸುವೆ' ಎಂದು ತಿಳಿಸಿದ್ದಾರೆ. ಸಂಸ್ಥೆಯ ಧರ್ಮದರ್ಶಿ ಲೋಕಪ್ಪ ಮುಂದಿನ ವರ್ಷದಿಂದ ಕನ್ನಡ ಪ್ರಬಂಧ ಸ್ಪರ್ಧೆ ಏರ್ಪಡಿಸುವುದಾಗಿ ತಿಳಿಸಿದ್ದಾರೆ.

- **ಸ.ರ.ಸುದರ್ಶನ,** ಕನ್ನಡ ವಿಕಾಸ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯ ಕಾರ್ಯದರ್ಶಿ

'ಆಂದೋಲನ' ಪ್ರತಿಭಾ ಪುರಸ್ಕೃತರು

ಕಳೆದ ಬಾರಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸೌಮ್ಯ (ಯುಕೆಜಿ), ಎಂ.ದೀಕ್ಷಿತಾ (೧ನೇ ತರಗತಿ), ಆರ್.ಲಕ್ಷ್ಮಿ (೨), ಅಭಯ್‌ಸಿಂಹ (೩), ಡಿ.ಪ್ರಜ್ವಲ್ (೪), ಪಿ.ಗಗನ್ (೫), ಆರ್.ಸೋಮಣ್ಣ (೬), ಎಚ್.ಜಿ.ಪ್ರಸಾದ್ (೭), ಟಿ.ಪಿ.ಮೇಘನಾ (೮), ಬಿ.ಎಂ.ರಕ್ಷಿತಾ (೯), ಎಸ್.ಸ್ಮಿತಾ (೧೦).

ಡಾ.ತಿಪ್ಪೇರುದ್ರಸ್ವಾಮಿ ಸ್ಮರಣಾರ್ಥ ಬಹುಮಾನ: ಕನ್ನಡ ಭಾಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸೌಮ್ಯ (ಯುಕೆಜಿ), ಎಂ.ದೀಕ್ಷಿತಾ (೧ನೇ ತರಗತಿ), ಆರ್.ಲಕ್ಷ್ಮಿ (೨), ಎಂ.ಗಗನ್ (೩), ಯಶಸ್ವಿನಿ (೪), ಪಿ.ಗಗನ್ (೫), ಎಂ.ಪ್ರೀತಿ (೬), ಎಂ.ದಿಶಾ (೭), ಎಸ್.ಮಂಜುಳ (೮), ಆರ್.ಹರೀಶ್ (೯), ಸ್ಮಿತಾ (೧೦).

ಡಾ.ಎಚ್.ಎಸ್.ಸುಜಾತಾ ಅವರು ಸ್ಥಾಪಿಸಿರುವ ಶ್ರೀಮತಿ ಗೌರಮ್ಮ– ಎಂ.ರಮಾನಂದಶೆಟ್ಟಿ ದತ್ತಿಯ ನಗದು ಬಹುಮಾನ ಹಾಗೂ ಡಾ.ಇಂದಿರಾರಾವ್ ಅವರು ಕೊಡಮಾಡುವ ೧೦ ಸಾವಿರ ರೂ. ಬಹುಮಾನ: ೧೦ನೇ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದ ಎಸ್.ಸ್ಮಿತಾ.

ಸರ್ವೇಶ ಮೂರ್ತಿ ಅವರ ೧,೯೦೦ ರೂ. ಪ್ರೋತ್ಸಾಹ ಬಹುಮಾನ: ೧೦ನೇ ತರಗತಿಯಲ್ಲಿ ದ್ವಿತೀಯ ಸ್ಥಾನ ಪಡೆದ ಎಚ್.ಜಿ.ಸಂಗೀತಾ.

ಅಂತರ ಪ್ರೌಢಶಾಲಾ ಮಟ್ಟದ ದ.ರಾ.ಬೇಂದ್ರೆ ಭಾವಗೀತೆ ಸ್ಪರ್ಧೆ: ಪ್ರಾಥಮಿಕ ವಿಭಾಗ– ನೃಪತುಂಗ ಕನ್ನಡ ಶಾಲೆಯ ಎಂ.ಅನಿಲ್, ಎಂ.ಕೀರ್ತನ ಹಾಗೂ ರಾಮಕೃಷ್ಣ ವಿದ್ಯಾಕೇಂದ್ರದ ಪಿ.ಆರ್.ಸಹನಾ. **ಪಾರಿತೋಷಕ–** ನೃಪತುಂಗ ಕನ್ನಡ ಶಾಲೆ. **ಪ್ರೌಢಶಾಲಾ ವಿಭಾಗ–** ಸದ್ವಿದ್ಯಾ ಶಾಲೆಯ ಪಿ.ಎನ್.ದಿಶಾ, ಅವಿಲಾ ಕಾನ್ವೆಂಟ್‌ನ ಎಸ್.ಶ್ರೀಗೌರಿ, ವಿಶ್ವಮಾನವ ವಿದ್ಯಾನಿಕೇತನ ಶಾಲೆಯ ಕೆ.ಚೈತನ್ಯ. **ಪಾರಿತೋಷಕ–** ಸದ್ವಿದ್ಯಾ ಶಾಲೆ.